# Akashvani : Bangalore
# National Bulletin In Kannada
# 21.12.2024 / 19.35 hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**21.12.2024 / 19.35 hrs**

**<><*<><>*><>**

**ಮುಖ್ಯಾಂಶಗಳು**

**೧. ಧ್ಯಾನವನ್ನು ದೈನಂದಿನ ಜೀವನದ ಭಾಗವನ್ನಾಗಿ ಮಾಡಿಕೊಳ್ಳುವಂತೆ ದೇಶದ ನಾಗರಿಕರಿಗೆ ಪ್ರಧಾನಿ ಕರೆ**

**೨. ರಾಷ್ಟ್ರೀಯ ಅರಣ್ಯ ವರದಿ-೨೦೨೩; ದೇಶದಲ್ಲಿ ೮ ಲಕ್ಷ ೨೭ ಸಾವಿರದ ೩೫೭ ಚದರ ಕಿಲೋಮೀಟರ್ ಅರಣ್ಯ ಪ್ರದೇಶ**

**೩. ಕರ್ನಾಟಕದಲ್ಲಿ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ; ಸಾಹಿತ್ಯಾಸಕ್ತರಿಂದ ಅಭೂತಪೂರ್ವ ಪ್ರತಿಕ್ರಿಯೆ**

**೪. ಕಳೆದ ಹತ್ತು ವರ್ಷಗಳಲ್ಲಿ ಈಶಾನ್ಯ ಭಾರತವು ಅಭಿವೃದ್ಧಿಯ ಕೇಂದ್ರಬಿಂದುವಾಗಿದೆ- ಕೇಂದ್ರ ಸಚಿವ ಅಮಿತ್ ಶಾ**

**೫. ೨೦೨೫ ರ ಐ.ಎಸ್.ಎಸ್.ಎಫ್. ಜೂನಿಯರ್ ಶೂಟಿಂಗ್ ವಿಶ್ವಕಪ್‌ಗೆ ಭಾರತ ಆತಿಥ್ಯ**

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಅವರು, ಧ್ಯಾನವನ್ನು ತಮ್ಮ ದೈನಂದಿನ ಜೀವನದ ಭಾಗವನ್ನಾಗಿ ಮಾಡಿಕೊಳ್ಳುವಂತೆ ಇಂದು ದೇಶದ ನಾಗರಿಕರಿಗೆ ಕರೆ ನೀಡಿದ್ದಾರೆ. ವಿಶ್ವ ಧ್ಯಾನ ದಿನದ ಅಂಗವಾಗಿ ಇಂದು ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ ಅವರು ಮಾನವನ ಜೀವನಕ್ಕೆ ಹಾಗೂ ಸಮಾಜಕ್ಕೆ ಸಾಮರಸ್ಯವನ್ನು ತರಲು ಧ್ಯಾನವು ಪ್ರಬಲ ಮಾರ್ಗವಾಗಿದೆ ಎಂದು ತಿಳಿಸಿದರು. ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ಆಪ್ ಮತ್ತು ಮಾರ್ಗದರ್ಶಿ ವಿಡಿಯೋಗಳು ನಮ್ಮ ದೈನಂದಿನ ದಿನಚರಿಯಲ್ಲಿ ಧ್ಯಾನವನ್ನು ಅಳವಡಿಸಿಕೊಳ್ಳಲು ಉಪಯುಕ್ತ ಸಾಧನಗಳಾಗಿವೆ ಎಂದು ಅವರು ಹೇಳಿದರು.

**<><*<><>*><>**

ಎರಡು ದಿನಗಳ ಪ್ರವಾಸದ ಹಿನ್ನೆಲೆ ಕುವೈತ್‌ಗೆ ಇಂದು ಮಧ್ಯಾಹ್ನ ತಲುಪಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆತ್ಮೀಯ ಸ್ವಾಗತ ದೊರೆಯಿತು. ನಂತರ ಪ್ರಧಾನಿ ಅವರು, ಗಲ್ಫ್ ಸ್ಪಿಕ್ ಕಾರ್ಮಿಕರ ಶಿಬಿರಕ್ಕೆ ಭೇಟಿ ನೀಡಿ ಕುವೈತ್‌ನಲ್ಲಿರುವ ಭಾರತದ ಕಾರ್ಮಿಕರನ್ನು ಭೇಟಿ ಮಾಡಿ ಸಂವಾದ ನಡೆಸಿದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ**

ಕುವೈತ್‌ನ ಅಧ್ಯಕ್ಷ ಶೇಖ್ ಮೆಶಾಲ್ ಅಲ್-ಅಹಮ್ಮದ್ ಅಲ್-ಜಾಬರ್ ಅಲ್-ಸಬಾಹ್ ಅವರ ಆಹ್ವಾನದ ಮೇರೆಗೆ ತೆರಳಿರುವ ಪ್ರಧಾನಿ ಅವರು, ಮುಂದಿನ ಎರಡು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ೪೩ ವರ್ಷಗಳಲ್ಲಿ ಕುವೈತ್‌ಗೆ ಭಾರತದ ಪ್ರಧಾನಿಯೊಬ್ಬರು ಭೇಟಿ ನೀಡುತ್ತಿರುವುದು ಇದೇ ಮೊದಲು. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ತಮ್ಮ ಭೇಟಿಯು ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ಬಾಂಧವ್ಯವನ್ನು ಬಲಪಡಿಸಲಿದೆ ಎಂದು ತಿಳಿಸಿದ್ದಾರೆ. ತಮ್ಮ ನಿರ್ಗಮನ ಹೇಳಿಕೆಯಲ್ಲಿ, ಭಾರತವು ಕುವೈತ್‌ನೊಂದಿಗೆ ಹಲವಾರು ತಲೆಮಾರುಗಳಿಂದ ಪೋಷಿಸಲ್ಪಟ್ಟ ಐತಿಹಾಸಿಕ ಸಂಬಂಧವನ್ನು ಗೌರವಿಸುತ್ತದೆ ಎಂದು ಹೇಳಿದರು. ಉಭಯ ರಾಷ್ಟ್ರಗಳು ಕೇವಲ ವ್ಯಾಪಾರ ಮತ್ತು ಇಂಧನ ಕ್ಷೇತ್ರಗಳ ಪಾಲುದಾರರಾಗಿ ಉಳಿಯದೆ, ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಶಾಂತಿ, ಭದ್ರತೆ, ಸ್ಥಿರತೆ ಹಾಗೂ ಸಮೃದ್ಧಿಯೆಡೆಗೆ ಬದ್ಧತೆ ಹೊಂದಿವೆ ಎಂದರು.

**<><*<><>*><>**

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಸಚಿವ ಭೂಪೇಂದ್ರ ಯಾದವ್ ಅವರು, ಇಂದು ಉತ್ತರಾಖಂಡದ ಡೆಹರಾಡೂನ್‌ನಲ್ಲಿ ರಾಷ್ಟ್ರೀಯ ಅರಣ್ಯ ವರದಿ-೨೦೨೩ ಅನ್ನು ಬಿಡುಗಡೆ ಮಾಡಿದರು. ದ್ವೈವಾರ್ಷಿಕವಾಗಿ ಪ್ರಕಟವಾಗುವ ಭಾರತೀಯ ಅರಣ್ಯ ಸಮೀಕ್ಷೆ ವರದಿಯು ರಾಷ್ಟ್ರದ ಅರಣ್ಯ ಮತ್ತು ವೃಕ್ಷ ಸಂಪನ್ಮೂಲಗಳ ಸಮಗ್ರ ಮೌಲ್ಯ ಮಾಪನವನ್ನು ನೀಡುತ್ತದೆ. ಈ ವರದಿಯ ಪ್ರಕಾರ ಭಾರತದ ಒಟ್ಟು ಅರಣ್ಯದ ವ್ಯಾಪ್ತಿಯು ೮ ಲಕ್ಷ ೨೭ ಸಾವಿರದ ೩೫೭ ಚದರ ಕಿಲೋಮೀಟರ್‌ನಷ್ಟು ವ್ಯಾಪಿಸಿದೆ. ಇದು ದೇಶದ ಭೌಗೋಳಿಕ ಪ್ರದೇಶದ ಶೇಕಡ ೨೫.೧೭ ರಷ್ಟಿದ್ದು, ೨೦೨೧ರ ಮೌಲ್ಯ ಮಾಪನಕ್ಕೆ ಹೋಲಿಸಿದರೆ, ಒಟ್ಟು ಅರಣ್ಯ ಪ್ರದೇಶವು ೧ ಸಾವಿರದ ೪೪೫ ಚದರ ಕಿಲೋಮೀಟರ್‌ಗಳಷ್ಟು ಹೆಚ್ಚಾಗಿದೆ. ಈ ವರದಿಯಲ್ಲಿ ಪ್ರಸ್ತುತಪಡಿಸಲಾದ ಮಾಹಿತಿಯು ನೀತಿ-ನಿರೂಪಕರು, ಸಂಶೋಧನಾ ಸಂಸ್ಥೆಗಳು ಮತ್ತು ಅರಣ್ಯ ನಿರ್ವಹಣೆಯಲ್ಲಿ ತೊಡಗಿರುವವರಿಗೆ ಅತ್ಯಮೂಲ್ಯವಾಗಿರುತ್ತದೆ. ಈ ಸಂಶೋಧನೆಯು ದೇಶಾದ್ಯಂತ ಅರಣ್ಯ ಸಂರಕ್ಷಣೆ ಮತ್ತು ಸುಸ್ಥಿರ ನಿರ್ವಹಣೆಯ ಅಭ್ಯಾಸಗಳನ್ನು ಹೆಚ್ಚಿಸಲು ಗಣನೀಯ ಕೊಡುಗೆ ನೀಡುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

**<><*<><>*><>**

೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಇಂದು ವಿಚಾರಗೋಷ್ಠಿಗಳು ಗಮನಸೆಳೆದವು. ಸಹಾತ್ಯಾಸಕ್ತರಿಂದ ಸಮ್ಮೇಳನಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಪ್ರಧಾನ ವೇದಿಕೆ ಹಾಗೂ ಎರಡು ಸಮನಾಂತರ ವೇದಿಕೆಗಳಿಂದ ತಲಾ ಐದರಂತೆ ಒಟ್ಟು ೧೫ ಗೋಷ್ಠಿಗಳು ನಡೆದವು. ಸಚಿವ ಎಚ್.ಕೆ.ಪಾಟೀಲ್ ಅಧ್ಯಕ್ಷತೆಯಲ್ಲಿ 'ಸಾಹಿತ್ಯದಲ್ಲಿ ರಾಜಕೀಯ: ರಾಜಕೀಯದಲ್ಲಿ ಸಾಹಿತ್ಯ' ಗೋಷ್ಠಿ ಗಮನ ಸೆಳೆದರೆ, ನೆಲ, ಜಲ ಸಾಕ್ಷರತೆ: ಆತ್ಮಾವಲೋಕನ, ಕರ್ನಾಟಕ: ೫೦ ಹಿನ್ನೋಟ- ಮುನ್ನೋಟ, ಮಂಡ್ಯ ನೆಲಮೂಲದ ಮೊದಲುಗಳು ಕರ್ನಾಟಕದ ಮೌಖಿಕ ಪರಂಪರೆಗಳ ಪ್ರದರ್ಶನ ಮತ್ತು ವಿವರಣೆ ಎಂಬ ಗೋಷ್ಠಿಗಳು ಪ್ರಧಾನ ವೇದಿಕೆ ಜರುಗಿದವು. ಸಮನಾಂತರ ವೇದಿಕೆ ೧ ರಲ್ಲಿ ಸೃಜನಶೀಲತೆ, ವಿದ್ಯುನ್ಮಾನ ಮಾಧ್ಯಮಗಳ ಸವಾಲುಗಳು, ದಲಿತ ಸಾಹಿತ್ಯದ ನೆಲೆಗಳು, ಕರ್ನಾಟಕ: ಪ್ರಕೃತಿ ವಿಕೋಪದ ಆತಂಕಗಳು, ಶತಮಾನೋತ್ಸವ ವರ್ಷದ ಕನ್ನಡ ಲೇಖಕರು, ಸಮನಾಂತರ ವೇದಿಕೆ ೨ರಲ್ಲಿ ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಸಾಹಿತ್ಯದ ಪಾತ್ರ, ಕರ್ನಾಟಕದ ಚಿತ್ರಣ ಬದಲಿಸಿದ ಚಳವಳಿಗಳು, ಸಾಹಿತ್ಯ ಪಾತ್ರಗಳ ಮುಖಾಮುಖಿ, ಶತಮಾನ-ರಜತ-ಸುವರ್ಣ ಸಂಭ್ರಮ, ಯುವಜನತೆ ಮತ್ತು ಸಬಲೀಕರಣ ಎಂಬ ಗೋಷ್ಠಿಗಳು ಗಮನ ಸೆಳೆದವು.

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಈಶಾನ್ಯ ಭಾಗವನ್ನು ಅಭಿವೃದ್ಧಿಯ ಕೇಂದ್ರಬಿಂದುವನ್ನಾಗಿಸಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. ತ್ರಿಪುರಾದ ಅಗರ್ತಲಾದಲ್ಲಿ ನಡೆದ ೭೨ನೇ ಸಮಗ್ರ ಈಶಾನ್ಯ ಪರಿಷತ್ ಸಭೆಯನ್ನುದ್ದೇಶಿ ಮಾತನಾಡಿದ ಅವರು, ಹಿಂದಿನ ಹತ್ತು ವರ್ಷಗಳು ದೇಶದ ಈಶಾನ್ಯ ಭಾಗದ ಅಭಿವೃದ್ಧಿಯಲ್ಲಿ ಪ್ರಮುಖ ಘಟ್ಟವಾಗಿದೆ ಎಂದು ಹೇಳಿದರು. ಈ ಭಾಗದಲ್ಲಿ ಹೂಡಿಕೆಯನ್ನು ಮಾಡಲು ಕೇಂದ್ರ ಸರ್ಕಾರವು, ಹೂಡಿಕೆದಾರರನ್ನು ಪ್ರೇರೇಪಿಸುತ್ತಿದೆ ಎಂದು ಅವರು ತಿಳಿಸಿದರು. ಪ್ರಾದೇಶಿಕ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಲು ಪ್ರಧಾನಿಯವರು ಪ್ರಾಮಾಣಿಕ ಪ್ರಯತ್ನ ಮಾಡುತ್ತಲಿದ್ದು, ಈ ಪ್ರದೇಶದಲ್ಲಿ ಶಾಂತಿ ಸ್ಥಾಪನೆಗೆ ಅವರ ಕೊಡುಗೆ ಶ್ಲಾಘನೀಯ ಎಂದು ಸ್ಮರಿಸಿದರು. ಈಶಾನ್ಯ ಭಾಗವನ್ನು ದೇಶದ ಇತರ ಭಾಗಗಳಿಗೆ ಸರಿಸಮನಾಗಿ ತರುವುದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಉದ್ದೇಶವಾಗಿದೆ ಎಂದು ಸಚಿವ ಅಮಿತ್ ಶಾ ಒತ್ತಿ ಹೇಳಿದರು.

**ಧ್ವನಿ: ಅಮಿತ್ ಶಾ**

ಈ ಸಂದರ್ಭದಲ್ಲಿ ಮಾತನಾಡಿದ ಈಶಾನ್ಯ ವಲಯಾಭಿವೃದ್ಧಿ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಈಶಾನ್ಯ ಭಾಗದಲ್ಲಿ ಹಿಂಸಾಚಾರ ಮತ್ತು ಉಗ್ರವಾದಕ್ಕೆ ತೀವ್ರಮಟ್ಟದಲ್ಲಿ ಕಡಿವಾಣ ಹಾಕುವಲ್ಲಿ ಮತ್ತು ಶಾಂತಿ, ನೆಮ್ಮದಿ ಸ್ಥಾಪಿಸುವಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪಾತ್ರ ಮಹತ್ವದ್ದು ಎಂದು ಹೇಳಿದರು. ಈಶಾನ್ಯ ಭಾಗದ ಉಗ್ರಗಾಮಿ ಚಟುವಟಿಕೆಗಳಲ್ಲಿ ಶೇಕಡ ೭೧ ರಷ್ಟು ಇಳಿಕೆಯಾಗಿದ್ದು, ಶೇಕಡ ೬೦ ರಷ್ಟು ಪ್ರಾಣಹಾನಿ ಪ್ರಕರಣಗಳಲ್ಲಿ ಇಳಿಕೆ ಕಂಡಿದೆ ಎಂದು ಮಾಹಿತಿ ನೀಡಿದರು.

**<><*<><>*><>**

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಂದು ಜೈಸಲ್ಮೇರ್‌ನಲ್ಲಿ ೫೫ನೇ ಜಿಎಸ್‌ಟಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಸರಕು ಮತ್ತು ಸೇವಾ ತೆರಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಕುರಿತು ಸಮಾಲೋಚನೆ ನಡೆಯಿತು. ಸಭೆಯಲ್ಲಿ ಜೀವ ಮತ್ತು ಆರೋಗ್ಯ ವಿಮೆಗೆ ವಿಧಿಸುವ ಜಿಎಸ್‌ಟಿ ದರದಲ್ಲಿ ಕಡಿತ,

ಅತ್ಯುತ್ತಮ ಶ್ರೇಣಿಯ ಕೈಗಡಿಯಾರ ಸೇರಿದಂತೆ ಇನ್ನಿತರ ವಸ್ತುಗಳ ಜಿಎಸ್‌ಟಿ ದರ ಹೆಚ್ಚಳ ಕುರಿತು ಚರ್ಚೆ ನಡೆಯಿತು. ಸಭೆಯಲ್ಲಿ ಗೋವಾ, ಹರಿಯಾಣ, ಜಮ್ಮು-ಕಾಶ್ಮೀರ, ಮೇಘಾಲಯ ಮತ್ತು ಒಡಿಶಾದ ಮುಖ್ಯಮಂತ್ರಿಗಳು, ಅರುಣಾಚಲಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣದ ಉಪಮುಖ್ಯಮಂತ್ರಿಗಳು ಹಾಗೂ ಇತರ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಹಣಕಾಸು ಸಚಿವರು ಪಾಲ್ಗೊಂಡಿದ್ದರು.

<><*<><>*><>

ಮುಂಬೈನಲ್ಲಿ ಕಳೆದ ಬುಧವಾರ ಸಂಭವಿಸಿದ ದೋಣಿ ದುರಂತದಲ್ಲಿ ಮೃತರ ಸಂಖ್ಯೆ ೧೫ ಕ್ಕೆ ಹೆಚ್ಚಳವಾಗಿದೆ. ೭ ವರ್ಷದ ಬಾಲಕನ ಮೃತದೇಹ ಪತ್ತೆಯಾಗಿದ್ದು, ಶೋಧಕಾರ್ಯ ಮುಂದುವರೆದಿದೆ. ದುರಂತದಲ್ಲಿ ಬಾಲಕ ತಾಯಿಯು ಅಸುನೀಗಿದ್ದಾರೆ. ನೌಕಾಪಡೆಯ ಹಡಗೊಂದು ಇಂಜಿನ್ ಪರೀಕ್ಷಾ ಸಮಯದಲ್ಲಿ ನಿಯಂತ್ರಣ ತಪ್ಪಿ, ಮುಂಬೈನ ಕಾರಂಜದಿಂದ ಹೊರಟಿದ್ದ ದೋಣಿಗೆ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ. ಎರಡೂ ನೌಕೆಗಳ ೧೧೩ ಪ್ರಯಾಣಿಕರ ಪೈಕಿ ೯೮ ಮಂದಿಯನ್ನು ರಕ್ಷಿಸಲಾಗಿದ್ದು, ೧೩ ಮಂದಿ ಮೃತಪಟ್ಟಿದ್ದಾರೆ. ಇಬ್ಬರು ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ. ದುರಂತದ ಬಗ್ಗೆ ಸಂತಾಪ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಮೃತರ ಕುಟುಂಬಗಳಿಗೆ ತಲಾ ೨ ಲಕ್ಷ ರೂಪಾಯಿ ಮತ್ತು ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ಮೃತರ ಕುಟುಂಬಗಳಿಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ೫ ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

<><*<><>*><>

ಉಕ್ರೇನಿಂದ ರಷ್ಯಾದ ಕಾಜಾ ನಗರದ ಮೇಲೆ ಡ್ರೋನ್ ದಾಳಿ ನಡೆದಿರುವುದಾಗಿ ವರದಿಯಾಗಿದೆ. ಬಹು ಅಂತಸ್ತಿನ ಕಟ್ಟಡಗಳ ನೆಲಸಮವಾಗಿವೆ ಹಾಗೂ ಕನಿಷ್ಠ ೮ ಡ್ರೋನ್‌ಗಳನ್ನು ಬಳಸಿ ಐದು ವಸತಿ ಕಟ್ಟಡಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ. ಇದರ ಪರಿಣಾಮ ಕಜಾನ್ ನಗರದ ಅಧಿಕಾರಿಗಳಿಂದ ಸ್ಥಳೀಯ ನಿವಾಸಿಗಳನ್ನು ತುರ್ತಾಗಿ ಸ್ಥಳಾಂತಿರಿಸುವ ಕಾರ್ಯ ಪ್ರಗತಿಯಲ್ಲಿದೆ. ನಾಗರದ ವಿಮಾನ ನಿಲ್ದಾಣದಿಂದ ತಾತ್ಕಾಲಿಕವಾಗಿ ವಿಮಾನ ಹಾರಾಟ ಸ್ಥಗಿತಗೊಳಿಸಿದೆ ಎಂದು ರಷ್ಯಾ ತಿಳಿಸಿದೆ. ರಷ್ಯಾ ರಕ್ಷಣಾ ಸಚಿವಾಲಯವು, ದಾಳಿ ನಡೆಸಿದ ಡ್ರೋನ್‌ಗಳು ಉಕ್ರೇನಿನ ಮೂಲದ್ದಾಗಿವೆ ಎಂದು ಆರೋಪಿಸಿದ್ದಾರೆ. ಉಕ್ರೇನಿನ ಅಧಿಕಾರಿಗಳು ಇದಕ್ಕೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿಲ್ಲ.

<><*<><>*><>

ಮುಂದಿನ ವರ್ಷ ನಡೆಯಲಿರುವ ಐ.ಎಸ್.ಎಸ್.ಎಫ್. ಜೂನಿಯರ್ ಶೂಟಿಂಗ್ ವಿಶ್ವಕಪ್ ಆತಿಥ್ಯವನ್ನು ಭಾರತಕ್ಕೆ ನೀಡಲಾಗಿದೆ. ರೈಫಲ್, ಪಿಸ್ತೂಲ್ ಮತ್ತು ಶಾಟ್‌ಗನ್ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. ಭಾರತದ ರಾಷ್ಟ್ರೀಯ ರೈಫಲ್ ಒಕ್ಕೂಟದ ಹೇಳಿಕೆಯಂತೆ, ಅಂತರಾಷ್ಟ್ರೀಯ ಕಾರ್ಯಕ್ರಮಗಳಿಗೆ ಆತಿಥ್ಯ ವಹಿಸುವ ಹಕ್ಕನ್ನು ಪಡೆಯುವ, ವಿಶ್ವದಲ್ಲಿ ಕ್ರೀಡೆಯ ಪ್ರಮುಖ ತಾಣಗಳಲ್ಲಿ ಒಂದಾಗಿ ಭಾರತ ತನ್ನ ಸ್ಥಾನವನ್ನು ಬಲಪಡಿಸಿಕೊಂಡಿದೆ. ಪಂದ್ಯಾವಳಿಯ ದಿನಾಂಕಗಳು ಇನ್ನಷ್ಟೇ ಅಂತಿಮಗೊಳ್ಳಬೇಕಿದೆ.

<><*<><>*><>

ಮಲೇಷ್ಯಾದ ಕೌಲಾಲಂಪುರದಲ್ಲಿ ನಾಳೆ ನಡೆಯಲಿರುವ ೧೯ ವರ್ಷದೊಳಗಿನವರ ಮಹಿಳಾ ಟಿ-೨೦ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಭಾರತ-ಬಾಂಗ್ಲಾದೇಶ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯ ಭಾರತೀಯ ಕಾಲಮಾನ ಬೆಳಗ್ಗೆ ೭ ಗಂಟೆಗೆ ನಡೆಯಲಿದೆ. ನಿನ್ನೆ ನಡೆದ ಸೂಪರ್-೪ ಪಂದ್ಯದಲ್ಲಿ ಭಾರತ, ೪ ವಿಕೆಟ್‌ಗಳಿಂದ ಶ್ರೀಲಂಕಾವನ್ನು ಮಣಿಸಿ, ಫೈನಲ್ ಪ್ರವೇಶಿಸಿದರೆ, ಬಾಂಗ್ಲಾದೇಶ ತಂಡ, ನೇಪಾಳ ತಂಡವನ್ನು ಮಣಿಸಿ, ಫೈನಲ್‌ಗೆ ಲಗ್ಗೆ ಇಟ್ಟಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೩೫ ಕ್ಕೆ <>*><>**